ಸ್ವಲ್ಪ ಗದ್ಗದ ದನಿಯಲ್ಲಿ, "ಕಸ್ತೂರ್, ಏನು ನಡೆಯಿತೆಂದು ಜೈಲಿನಲ್ಲಿರುವ ನನಗೆ ಹೇಗೆ ತಿಳಿಯುತ್ತದೆ?" ಎಂದವರು ತಕ್ಷಣ, "ನೀನು ಅಲ್ಲಿಗೆ ಬರುವಾಗ ಜ್ವರದಿಂದಲೂ, ಅತಿಸಾರದಿಂದಲೂ ಕಷ್ಟಪಟ್ಟೆಯಂತೆಯಲ್ಲಾ?" ಎಂದಾಗ ಕಸ್ತೂರ್ ಭಾವುಕಳಾಗಿ, "ಬಿಡಿ, ಅದ್ಯಾಕೆ ಈಗ... ನಮ್ಮನ್ನು ಅಲ್ಲಿಗೆ ಕರೆದುಕೊಂಡು ಬರುವಾಗ ರೈಲು ನಿಲ್ದಾಣದ ವೆಯ್ಟಿಂಗ್ ರೂಮಿನಲ್ಲಿ ಕುಳಿತಿದ್ದೆವು. ಇಡೀ ದೇಶದಲ್ಲಿ ಬ್ರಿಟಿಷ್ ಸರಕಾರಕ್ಕೆ ವಿರುದ್ಧವಾಗಿ, 'ಮಾಡು ಅಥವಾ ಮಡಿ' ಎಂಬ ದೊಡ್ಡ ಹೋರಾಟ ನಡೆಯುತ್ತಿರುವಾಗಲೂ, ಅಲ್ಲಿ ಜನ ಎಂದಿನಂತೆ ಬಂದು ಹೋಗುತ್ತಿದ್ದರು. ನಿಲ್ದಾಣದ ನೌಕರರು ಸಿಗರೇಟ್ ಸೇದುತ್ತಾ ಸಹಜವಾಗಿ ಮಾತನಾಡುತ್ತಿದ್ದರು. ಕೂಲಿಯವರು ಪ್ರಯಾಣಿಕರ ಜತೆಯಲ್ಲಿ ಚೌಕಾಸಿ ಮಾಡುತ್ತಿದ್ದರು. ಸುಶೀಲಾ 'ನನ್ನ ದೇಹ ಬಲಹೀನವಾಗಿದೆ. ಜ್ವರವೂ ಇದೆ' ಅಂತ ಹೇಳಿದಳು. ಆದರೆ, ಆಗ ನನ್ನ ಚಿಂತೆಯೆಲ್ಲ ಸ್ವಾತಂತ್ರ್ಯ ಹೋರಾಟದಲ್ಲಿ ನಿಮ್ಮಿಂದ ಹೇಗೆ ಜಯಗಳಿಸಲು ಸಾಧ್ಯ ಎಂಬುದರ ಬಗ್ಗೆಯೇ ಇತ್ತು."

"ಕಸ್ತೂರ್, ನಾನು ಯಾಕೆ ನಿನ್ನ ಮೇಲೆ ಕೋಪ ಮಾಡಿಕೊಳ್ಳುತ್ತೇನೆ ಅಂತ ಈಗ ಗೊತ್ತಾಯಿತೇ... ನಾವು ಕೈಗೊಂಡಿರುವ ದೇಶದ ಬಿಡುಗಡೆ... ಅದೂ ಸಹ ಅಹಿಂಸಾ ಮಾರ್ಗದಲ್ಲಿ... ಇದು ಎಷ್ಟು ದೊಡ್ಡ ವಿಷಯ. ಇದರಲ್ಲಿ ಅಪನಂಬಿಕೆ ಉಂಟಾದರೆ, ಹೋರಾಟವನ್ನು ಮುಂದುವರೆಸಲು ಸಾಧ್ಯವೇ?''

"ಓಹೋ... ಅಪನಂಬಿಕೆ ಉಂಟಾದುದರಿಂದಲೇ, ನಾನು ನಿಮ್ಮ ಹೆಂಡತಿ ಎಂಬ ಅಧಿಕಾರದಿಂದ ಅಕ್ರಮವಾಗಿ ಆಘಾಖಾನ್ ಜೈಲಿಗೆ ಬಂದಿರುವೆ ಅಂತ ಅಂದುಕೊಂಡಿರಿ, ಅಲ್ಲವೇ?"

''ಅದಕ್ಕೆ ಆಗಲೇ ಮಹಾದೇವ್ ಬಳಿ ಸ್ಪಷ್ಟನೆ ನೀಡಿದ್ದೆಯಲ್ಲಾ ಕಸ್ತೂರ್..." ಮಾತು ತಡವರಿಸಿತು.

ದೇಹ ನರಳಿತು. ಮೈತುಂಬ ಹರಡಿದ್ದ ನೋವು ಅವರನ್ನು ಮುಂದೆ ಮಾತನಾಡಲು ಬಿಡಲಿಲ್ಲ. ಅದನ್ನು ಅರಿಯದೆ ಕಸ್ತೂರ್, "ನಿನ್ನೆ ಕೆಮ್ಮಿಗೆ ಪುಡಿಮಾಡಿ ಇಟ್ಟಿದ್ದ ಲವಂಗ ಮುಗಿದುಹೋಯಿತು, ಮನುವಿನ ಬಳಿ ಪುಡಿ ಮಾಡಲು ಹೇಳಿದಿರಾ..." ಎಂದಳು.

ಮೋಹನನಿಂದ ಯಾವ ಉತ್ತರವೂ ಇಲ್ಲ. ತೂತಾಗಿದ್ದ ಎದೆಯಲ್ಲಿ ರಕ್ತ ಸೋರುತ್ತಿತ್ತು. ಮಧ್ಯಾಹ್ನ ಜೇಡಿಮಣ್ಣಿನ ಚಿಕಿತ್ಸೆಯ ಅನಂತರ ಮನು ಮತ್ತು ಆಭಾ ಒತ್ತಿದ್ದ ಕಾಲುಗಳು ಮರದಂತೆ ಬಿದ್ದಿದ್ದವು. ಧ್ವನಿಗಳು, ಧ್ವನಿಗಳು... ಎಲ್ಲ ಕಡೆ ಅಳುವಿನ ದನಿಗಳು. ಅಳುವಿನಲ್ಲಿ ತೊಯ್ದ ಆಕ್ರಂದನಗಳು. ಬಾಪು... ಬಾಪೂ... ದಿನಪತ್ರಿಕೆಗಳಲ್ಲಿ ನಾಳೆ ಇದೇ ದೊಡ್ಡ ಸುದ್ದಿಯಾಗಬಹುದು. ಇಂದಿನ ದಿನಪತ್ರಿಕೆಯಲ್ಲಿ ದಾರಾಸಿಂಗ್ ಎಂಬುವರು 'ಗಾಂಧಿ ರಾಜಕೀಯವನ್ನು ತೊರೆದು ಹಿಮಾಲಯಕ್ಕೆ ಹೋಗಿ ವಿಶ್ರಾಂತಿ ಪಡೆದುಕೊಳ್ಳಬೇಕು. ಅವರಿಂದಲೇ ಇಷ್ಟೆಲ್ಲಾ ಸಮಸ್ಯೆಗಳು' ಎಂದು ಹೇಳಿದ್ದರು. ನಿನ್ನೆ ಸಹ ನಿರಾಶ್ರಿತನೊಬ್ಬ ಅವರ ಎದುರು ನಿಂತು ಹೀಗೆಯೇ ಏನನ್ನೋ ಕಿರುಚಾಡಿದ್ದ.

ಛಿದ್ರ ಛಿದ್ರವಾಗಿ ಹರಡಿಕೊಂಡಿದ್ದ ತುಣುಕುಗಳನ್ನು ಒಂದುಗೂಡಿಸಿ ತನ್ನ ಆಕಾರವನ್ನು ಮೋಡ ಸರಿಮಾಡಿಕೊಂಡಿತು. ಈ ನಾಲ್ಕು ವರ್ಷಗಳಲ್ಲಿ ಅದು ತನ್ನ ದೇಹವನ್ನು ಎಳೆದುಕೊಂಡು ಎಲ್ಲೆಲ್ಲಾ ಅಲೆದಾಡಿತ್ತು. "ಇಲ್ಲಿಂದ ನೋಡುವಾಗ, ಪೋರ್‌ಬಂದರಿನ ಧಗೆಯಿಲ್ಲದ ಹಗಲನ್ನು, ಕಡಲ ಗಾಳಿಯಿಂದ ತಂಪಾಗಿರುವ ರಾತ್ರಿಯನ್ನು ಚೆನ್ನಾಗಿ ಅನುಭವಿಸಲು ಸಾಧ್ಯ. ಕಡಲಿನ ವಿಶಾಲತೆಯನ್ನು, ಅದರ ಬಿಳಿ ಅಲೆಗಳು ಭೂಮಿಯನ್ನು ತಾಕಿ ಉಪ್ಪು ನೊರೆಗಳಾಗಿ ಅಪ್ಪಳಿಸುವುದನ್ನು ಬೇಸರವಿಲ್ಲದೆ ನೋಡುವ ಭತ್ತದ ತೆನೆಗಳಂತೆ ಕಾಥೆವಾಡಿ ಜನಗಳಿಗೆ ಆ ಪ್ರಕೃತಿ, ಅದರ ಸೊಬಗು ಎಂದಿಗೂ ಬೇಸರ ಮೂಡಿಸುವುದಿಲ್ಲ" ಇಂತಹ ಭಾವನೆಗಳನ್ನು ಕೆರಳಿಸಿ ನಿಟ್ಟುಸುರಿಗೆ ಚದುರಿಹೋದ ಮೋಡದ ತುಂಡುಗಳು, ಮೋಹನನ ಮುಖದಲ್ಲಿ ನೋವನ್ನೂ ಮೀರಿ ಎದ್ದ ಮುಗುಳ್ನಗುವನ್ನು ಕಂಡಕೂಡಲೇ ಮತ್ತೆ ಒಂದುಗೂಡಿದವು.